**ದಿನಾಂಕಃ 23.06.2026 ರಂದು ಸಾಕ್ಷಿಗೆ ಪುನಃ ಪ್ರಮಾಣವಚನ ಬೋಧಿಸಲಾಯಿತು.**

**ಪಾಟಿ ಸವಾಲುಃ ವಾದಿ ಪರವಾಗಿ ಶ್ರೀ ಜಿ ಕೆ ಎಸ್ ವಕೀಲರಿಂದ**.

ವಾದಿಗಳು ಈ ದಾವೆಯನ್ನು ಏಕೆ ಹಾಕಿರುತ್ತಾರೆ ಅಂದರೆ ಸಾಕ್ಷಿ ಜಮೀನು ಸಂಬಂಧ ಹಾಕಿರುತ್ತಾರೆ ಎನ್ನುತ್ತಾರೆ. ವಾದಿಗಳು ಯಾವ ಪರಿಹಾರ ಕೋರಿ ಈ ದಾವೆ ಹಾಕಿರುತ್ತಾರೆಂದರೆ ಸಾಕ್ಷಿ ಜಮೀನು ನಮಗೆ ಬೇಕು ಎಂದು ಹಾಕಿರುತ್ತಾರೆ ಎನ್ನುತ್ತಾರೆ. ವಾದಿಗಳು ಮಾನಪ್ಪಶೆಟ್ಟಿಯ ಮೊಮ್ಮಕ್ಕಳು ಅಂದರೆ ಸರಿ. ಮಾನಪ್ಪಶೆಟ್ಟಿಗೆ ಎಷ್ಟು ಜನ ಮಕ್ಕಳು ಅಂದರೆ ಸಾಕ್ಷಿ 5 ಜನ ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳು ಎನ್ನುತ್ತಾರೆ. ವಾದಿಗಳು ಏನು ದಾಖಲೆ ಹಾಜರು ಮಾಡಿರುತ್ತಾರೆಂದು ನೀವು ತಿಳಿದುಕೊಂಡಿರುತ್ತೀರಾ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ವಾದಿಗಳು ಹಾಜರುಪಡಿಸಿರುವ ನಿಪಿ–2 ನ್ನು ನೀವು ವಕೀಲರ ಮೂಲಕ ಓದಿ ತಿಳಿದುಕೊಂಡಿರುತ್ತೀರಾ ಅಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಾವಾ ಆಸ್ತಿಯನ್ನು ಮಾನಪ್ಪಶೆಟ್ಟಿ ಖರೀದಿ ಮಾಡಿರುತ್ತಾರೆ ಅಂದರೆ ಸರಿಯಲ್ಲ. ನಿಪಿ–2 ರಲ್ಲಿ ಮಾನಪ್ಪಶೆಟ್ಟಿ ಒಬ್ಬರೆ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತಾರೆಂದು ಇದೆ ಅಂದರೆ ಸಾಕ್ಷಿ ಒಟ್ಟು ಕುಟುಂಬದ ಪರವಾಗಿ ಖರೀದಿಯಾಗಿದೆ ಎನ್ನುತ್ತಾರೆ. ನಿಪಿ–2 ರಲ್ಲಿ ದಾವಾ ಆಸ್ತಿಯನ್ನು ಮಾನಪ್ಪಶೆಟ್ಟಿ ಮತ್ತು ನೀಲಪ್ಪಶೆಟ್ಟಿ ಖರೀದಿ ಮಾಡಿರುತ್ತಾರೆಂದು ಬರೆದಿಲ್ಲ ಅಂದರೆ ಸಾಕ್ಷಿ ಎಲ್ಲರೂ ಒಟ್ಟಾಗಿ ಖರೀದಿ ಮಾಡಿರುತ್ತಾರೆ ಎನ್ನುತ್ತಾರೆ. ದಾವಾ ಆಸ್ತಿಯನ್ನು ಮಾನಪ್ಪಶೆಟ್ಟಿ ಮಾತ್ರ ಖರೀದಿ ಮಾಡಿರುವುದರಿಂದ ನನ್ನ ತಂದೆಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಅಂದರೆ ಸರಿಯಲ್ಲ. ನಿಪಿ–3 ರಿಂದ 9 ರ ಬಗ್ಗೆ ನಿಮ್ಮ

ವಕೀಲರ ಮೂಲಕ ಕೇಳಿ ತಿಳಿದುಕೊಂಡಿರುತ್ತೀರಾ ಅಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಪಿ–3 ರಿಂದ 9 ರ ಕಾಲಂ ನಂ.9 ರಲ್ಲಿ ಮಾನಪ್ಪಶೆಟ್ಟಿ ಬಿನ್ ಮಲ್ಲಾರಿಶೆಟ್ಟಿ ಕ್ರಯದ ಮೂಲಕ ಖರೀದಿ ಎಂದು ನಮೂದಿಸಲಾಗಿದೆ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ–3 ರಿಂದ 9 ರ ಕಾಲಂ ನಂ.9 ರಲ್ಲಿ ನಿಮ್ಮ ಹೆಸರು ಮತ್ತು ನಿಮ್ಮ ತಂದೆಯ ಹೆಸರು ಇರುವುದಿಲ್ಲ ಅಂದರೆ ಸಾಕ್ಷಿ ಆರ್ ಆರ್ ಫಾಯಿು ನಲ್ಲಿ ಇರುತ್ತದೆ ಎನ್ನುತ್ತಾರೆ. ಮಾನಪ್ಪಶೆಟ್ಟಿ ಒಬ್ಬರೆ ದಾವಾ ಜಮೀನನ್ನು ಖರೀದಿ ಮಾಡಿರುವ ಕಾರಣ ನಿಪಿ–3 ರಿಂದ 9 ರ ಕಾಲಂ ನಂ.9 ರಲ್ಲಿ ನಿಮ್ಮ ಹೆಸರು ಬಂದಿಲ್ಲ ಅಂದರೆ ಸಾಕ್ಷಿ ನಾವು ಜಮೀನು ಸಾಗುವಳಿ ಮಾಡುತ್ತಿದ್ದೇವೆ ಎನ್ನುತ್ತಾರೆ. ನಿಪಿ–2 ರಲ್ಲಿ ದಾವಾ ಜಮೀನಿನ ಸ್ವಾಧೀನವನ್ನು ಮಾನಪ್ಪಶೆಟ್ಟಿಯವರಿಗೆ ಬಿಟ್ಟು ಕೊಟ್ಟಿರುತ್ತೇವೆಂದು ಬರೆಯಲಾಗಿದೆ ಅಂದರೆ ಸಾಕ್ಷಿ ಅದು ಸುಳ್ಳು ಇರುತ್ತದೆ ಎನ್ನುತ್ತಾರೆ. ನಿಪಿ–2 ರಲ್ಲಿ ದಾವಾ ಸ್ವತ್ತಿನ ಸ್ವಾಧೀನವನ್ನು ಮಾನಪ್ಪಶೆಟ್ಟಿಯವರಿಗೆ ಬಿಟ್ಟು ಕೊಟ್ಟಿರುತ್ತೇವೆಂದು ಬರೆದಿರುವುದನ್ನು ನೀವು ಯಾವುದಾದರೂ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುತ್ತೀರಾ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸರ್ವೇ ನಂ.38 ಕ್ಷೇತ್ರ 2 ಎಕರೆ 30 ಗುಂಟೆಯನ್ನು 1942 ರಲ್ಲಿ 3 ಜನ ಸೇರಿ ಭೋಗ್ಯಕ್ಕೆ ಹಾಕಿದ್ದರು ಅಂದರೆ ಸಾಕ್ಷಿ ಭೋಗ್ಯಕ್ಕೆ ಹಾಕಿದ್ದರು ನಂತರ ವಾಪಸ್ಸು ಬಿಡಿಸಿಕೊಂಡಿರುತ್ತಾರೆ ಎನ್ನುತ್ತಾರೆ. ನಿಮ್ಮ ಅಜ್ಜ ಮಲ್ಲಾರಿಶೆಟ್ಟಿ ಯಾವಾಗ ಮರಣ ಹೊಂದಿರುತ್ತಾರೆಂದು ಹೇಳಲು ಆಗುತ್ತದೆಯಾ ಅಂದರೆ ಸಾಕ್ಷಿ ಹೇಳಲು ಆಗುವುದಿಲ್ಲ ಎನ್ನುತ್ತಾರೆ. 1943 ರಲ್ಲಿ ಮಾನಪ್ಪಶೆಟ್ಟಿ ಮತ್ತು ನನ್ನ ತಂದೆ ಆಸ್ತಿಗಳನ್ನು ವಿಭಾಗ ಮಾಡಿಕೊಂಡು ಬೇರೆ–ಬೇರೆ ವಾಸ ಇರುತ್ತಿದ್ದರು ಅಂದರೆ ಸರಿಯಲ್ಲ. 1943 ರಲ್ಲಿ

ಬೇರೆಯಾದ ನಂತರ ಮಾನಪ್ಪಶೆಟ್ಟಿ ತನ್ನ ಸ್ವಂತ ಆದಾಯದಲ್ಲಿ ದಾವಾ ಆಸ್ತಿಯನ್ನು ದಿನಾಂಕಃ 20.04.1948 ರಂದು ಖರೀದಿ ಮಾಡಿರುತ್ತಾರೆ ಅಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ನೀವು ಯಾವ ದಾಖಲೆಗಳನ್ನು ಹಾಜರು ಮಾಡಿರುತ್ತೀರೆಂದು ನಿಮಗೆ ಹೇಳಲು ಆಗುತ್ತದೆಯಾ ಅಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪ್ರತಿವಾದಪತ್ರದಲ್ಲಿ ಏನು ಬರೆಯಲಾಗಿದೆಂದು ನಿಮಗೆ ಗೊತ್ತಿಲ್ಲ ಅಂದರೆ ಸರಿ. ನಿಮ್ಮ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಏನು ಬರೆಯಲಾಗಿದೆಂದು ನಿಮಗೆ ಗೊತ್ತಾ ಅಂದರೆ ಸಾಕ್ಷಿ ನಾನೇ ಹೇಳಿ ಬರೆಸಿರುತ್ತೇನೆ ಆದರೆ ಏನು ಬರೆಸಿರುತ್ತೇನೆಂದು ನನಗೆ ತಿಳಿಯುವುದಿಲ್ಲ ಎನ್ನುತ್ತಾರೆ. ನಿಡಿ-1 ನ್ನು ನಾನು ಹಾಜರುಪಡಿಸಿರುತ್ತೇನೆ ಅಂದರೆ ಸರಿ. ನಿಡಿ-1 ರ ಪ್ರಕಾರ ನಾನು 6 ನೇ ಪ್ರತಿವಾದಿ ಇರುತ್ತೇನೆ ಅಂದರೆ ಸರಿ. ಅ.ದಾ.ನಂ.114/2007 ರಲ್ಲಿ ನೀವು ಪ್ರತಿವಾದಪತ್ರ ಸಲ್ಲಿಸಿರುತ್ತೀರೋ ಅಥವಾ ಇಲ್ಲವೋ ಅಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ಅ.ದಾ.ನಂ.114/2007 ರಲ್ಲಿ ಸರ್ವೇ ನಂ.38 ರಲ್ಲಿ ನಾವು 1 ಎಕರೆ 15 ಗುಂಟೆ ಜಮೀನಿನ ಮಾಲೀಕರು ಎಂದು ಘೋಷಣೆ ಮಾಡಿಲ್ಲ ಅಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ನಾವು ಮಾಲೀಕರು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ನಿಡಿ-1 ಮತ್ತು 2 ರಲ್ಲಿ ನಾವು ದಾವಾ ಸ್ವತ್ತಿನ ಮಾಲೀಕರು ಎಂದು ನಮೂದಿಸಿಲ್ಲ ಅಂದರೆ ಸರಿಯಲ್ಲ. ಕೆರೆಹಳ್ಳಿ ಗ್ರಾಮದ ಗ್ರಾಮಲೆಕ್ಕಾಧಿಕಾರಿ ಮತ್ತು ಕುಪ್ಪಗಡ್ಡೆ ಗ್ರಾಮದ ರೆವಿನ್ಯೂ ಇನ್ಸಪೆಕ್ಟರವರ ಜೊತೆ ನಾನು ಮತ್ತು ನನ್ನ ತಂದೆ ಚೆನ್ನಾಗಿದ್ದೇವು ಅಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆ ಕೆರೆಹಳ್ಳಿ ಗ್ರಾಮದ

ಗ್ರಾಮಲೆಕ್ಕಾಧಿಕಾರಿ ಮತ್ತು ಕುಪ್ಪಗಡ್ಡೆ ಗ್ರಾಮದ ರೆವಿನ್ಯೂ ಇನ್ಸಪೆಕ್ಟರವರ ಜೊತೆ ಶಾಮೀಲಾಗಿ ದಾವಾ ಜಮೀನಿನ ಪಹಣಿಯಲ್ಲಿ ನಮ್ಮ ಹೆಸರನ್ನು ದಾಖಲೆ ಮಾಡಿಕೊಂಡಿರುತ್ತೇವೆ ಅಂದರೆ ಸರಿಯಲ್ಲ. ನಾವು ದಾಖಲಾತಿ ಸೃಷ್ಟಿ ಮಾಡಿರುವ ವಿಚಾರ ವಾದಿಗಳಿಗೆ ದಿನಾಂಕಃ 15.06.2025 ರಂದು ತಿಳಿಯಿತು ಅಂದರೆ ಸರಿಯಲ್ಲ. ಎ ಸಿ ಸಾಗರದವರ ಮುಂದೆ ಆರ್ ಎ ನಂ.58/2021 ರಲ್ಲಿ ವಾದಿಗಳ ಗಮನಕ್ಕೆ ಬಾರದ ರೀತಿಯಲ್ಲಿ ಆದೇಶ ಮಾಡಿಸಿಕೊಂಡಿರುತ್ತೇವೆ ಅಂದರೆ ಸರಿಯಲ್ಲ. ದಾವಾ ಆಸ್ತಿ ವಾದಿಯರ ಅಜ್ಜ ಮಾನಪ್ಪಶೆಟ್ಟಿಯವರ ಸ್ವಯಾರ್ಜಿತ ಆಸ್ತಿ ಇರುತ್ತದೆ ಹಾಗಾಗಿ ನನಗೂ ಮತ್ತು ನನ್ನ ತಂದೆಗೂ ದಾವಾ ಆಸ್ತಿಯಲ್ಲಿ ಹಕ್ಕು ಇರುವುದಿಲ್ಲ ಅಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ
ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.